ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
KARNATAKA LEGISLATIVE ASSEMBLY, RESEARCH AND REFERENCE BRANCH
ಪತ್ರಿಕಾ ತುಣುಕುಗಳು
PAPER CLIPPINGS
10
ಶಾಖೆ / ವಿಷಯ : DEPARTMENT / SUBJECT:
ಪತ್ರಿಕೆಯ ಹೆಸರು : NAME OF THE NEWS PAPER: ಕನ್ನಡ ಪ್ರಭ
ದಿನಾಂಕ : DATE 29/3/2021

# ಸೀಡಿ ಲೇಡಿ ಇಂದು ಪ್ರತ್ಯಕ್ಷ

## ಬೆಂಗಳೂರಿನ ಮ್ಯಾಜಿಸ್ಟ್ರೇಟ್ ನ್ಯಾಯಾಧೀಶರೆದುರು ಹಾಜರು: ವಕೀಲ

## ಯುವತಿಗೆ ಎಸ್‌ಐಟಿ ಮೇಲೆ ನಂಬಿಕೆಯಿಲ್ಲ। ಹೀಗಾಗಿ ಕೋರ್ಟ್‌ಗೆ ಲೇಡಿ

• ಕನ್ನಡಪ್ರಭ ವಾರ್ತೆ ಬೆಂಗಳೂರು

ದಿನಕ್ಕೊಂದು ತಿರುವು ಪಡೆಯುತ್ತಿರುವ ಮಾಜಿ ಸಚಿವ ರಮೇಶ್ ಜಾರಕಿಹೊಳಿ ಅವರ ವಿಡಿಯೋದಲ್ಲಿ ಇದ್ದಾರೆ ಎನ್ನಲಾದ ಯುವತಿ, ಸೋಮವಾರ ನ್ಯಾಯಾಧೀಶರ ಎದುರು ಹಾಜರಾಗುವ ಸಾಧ್ಯತೆ ಹೆಚ್ಚಾಗಿದೆ.

ಈ ಬಗ್ಗೆ ಮಾಧ್ಯಮಗಳಿಗೆ ಸ್ಪಷ್ಟಪಡಿಸಿರುವ ಯುವತಿ ಪರ ವಕೀಲ ಕೆ.ಎನ್.ಜಗದೀಶ್ ಅವರು, 'ನಾವು ಯಾವುದೇ ಬ್ರಾಂಚ್ ಹಾಕುವುದಿಲ್ಲ, ಯುವತಿ ನ್ಯಾಯಾಧೀಶರ ಎದುರು ಹಾಜರಾಗಲಿದ್ದಾರೆ' ಎಂದಿದ್ದಾರೆ.

'ಯುವತಿಗೆ ಎಸ್‌ಐಟಿ ಮೇಲೆ ನಂಬಿಕೆ ಇಲ್ಲ, ಈಗಾಗಲೇ ಆಕೆಯ ಪೋಷಕರು, ಸಹೋದರರಿಗೆ ಬ್ಲ್ಯಾಕ್‌ಮೇಲ್ ಮಾಡಿ ಸುಳ್ಳು ಹೇಳಿಕೆ ಕೊಡಿಸಿದ್ದಾರೆ. ಹೀಗಾಗಿ ಎಸ್‌ಐಟಿ ಮುಂದೆ ಹಾಜರಾದರೆ, ತನಿಖಾಧಿಕಾರಿಗಳು ತನಿಖೆಯ ದಿಕ್ಕು ತಪ್ಪಿಸುವ ಸಾಧ್ಯತೆ ಇದೆ. ನನಗೆ ಎಸ್‌ಐಟಿ ಮೇಲೆ ನಂಬಿಕೆ ಇಲ್ಲ. ಹೀಗಾಗಿ ನೇರವಾಗಿ ಮ್ಯಾಜಿಸ್ಟ್ರೇಟ್ ಮುಂದೆ ಹಾಜರಾಗಿ ಘಟನೆಯ ಇಂಚಿಂಚೂ ಮಾಹಿತಿ ಹೇಳುತ್ತೇನೆ ಎಂದಿದ್ದಾರೆ.

↘ 8

### ರಕ್ಷಣೆ ನೀಡಲು ಬದ್ಧ



ಯುವತಿಗೆ ಅಗತ್ಯ ರಕ್ಷಣೆ ನೀಡಲು ಸರ್ಕಾರ ಬದ್ಧವಾಗಿದೆ. ವಿಚಾರಣೆಗೆ ಹಾಜರಾಗುವಂತೆ ಸಂತ್ರಸ್ತ ಯುವತಿಗೆ ಈಗಾಗಲೇ 5 ಬಾರಿ ನೋಟಿಸ್ ನೀಡಿದ್ದೇವೆ. ಅವರು ಇರುವಲ್ಲಿಗೇ ತೆರಳಿ ಏನು ಬೇಕೋ ಪಡೆದುಕೊಳ್ಳುವುದಕ್ಕೆ ಸಿದ್ಧರಿದ್ದೇವೆ.

• ಬಸವರಾಜ ಬೊಮ್ಮಾಯಿ ಗೃಹಸಚಿವ

### ಜಾರಕಿಹೊಳಿಗೆ 3ನೇ ನೋಟಿಸ್



ಬೆಂಗಳೂರು: ಸೀಡಿ ಪ್ರಕರಣ ಸಂಬಂಧ ಮಾಜಿ ಸಚಿವ ರಮೇಶ್ ಜಾರಕಿಹೊಳಿ ಅವರಿಗೆ ಎಸ್‌ಐಟಿ ಭಾನುವಾರ 3ನೇ ಬಾರಿಗೆ ನೋಟಿಸ್ ಜಾರಿ ಮಾಡಿದೆ. ಅಲ್ಲದೆ, ಪ್ರಕರಣದ ಕಿಂಗ್‌ಪಿನ್ ಎನ್ನಲಾದ ಪತ್ರಕರ್ತ ನರೇಶ್ ಗೌಡ ಪತ್ನಿ ಹಾಗೂ ಶ್ರವಣ್ ಸಹೋದರನಿಗೂ ಸೋಮವಾರ ವಿಚಾರಣೆಗೆ ಹಾಜರಾಗುವಂತೆ ಎಸ್‌ಐಟಿ ನೋಟಿಸ್ ಜಾರಿ ಮಾಡಿದೆ.

ವಿವರ ↘ 5

### ಯುವತಿಗೆ ಮತ್ತೆ ನೋಟಿಸ್

ಬೆಂಗಳೂರು: ಅಜ್ಞಾತ ಸ್ಥಳದಲ್ಲಿರುವ ಸಿ.ಡಿ. ಯುವತಿಯನ್ನು ವಿಚಾರಣೆಗೆ ಕರೆತರುವಂತೆ ಆಕೆಯ ಪರ ವಕೀಲರಿಗೆ ಎಸ್‌ಐಟಿ ಅಧಿಕಾರಿಗಳು ನೋಟಿಸ್ ಜಾರಿ ಮಾಡಿದ್ದಾರೆ. ಪ್ರಕರಣದಲ್ಲಿ ಯುವತಿ ಹೇಳಿಕೆ ಅಗತ್ಯವಿದ್ದು, ಈಗಾಗಲೇ ಅವರಿಗೆ ಮೂರು ಬಾರಿ ನೋಟಿಸ್ ನೀಡಲಾಗಿದೆ. ಅವರು ವಿಚಾರಣೆಗೆ ಬಂದಿಲ್ಲ ಎಂದು ಪೊಲೀಸರು ವಕೀಲ ಜಗದೀಶ್ ಅವರಿಗೆ ವಾಟ್ಸ್‌ಆ್ಯಪ್ ಮೂಲಕ ನೋಟಿಸ್ ಪ್ರತಿ ಕಳುಹಿಸಿದ್ದಾರೆ ಎಂದು ತಿಳಿದು ಬಂದಿದೆ.

### ಯುವತಿ ಪೋಷಕರ ವಿಚಾರಣೆ

ಬೆಳಗಾವಿ: ಮಾಜಿ ಸಚಿವರ ಸೀಡಿಯಲ್ಲಿರುವ ಯುವತಿಯ ಪೋಷಕರನ್ನು ಎಸ್‌ಐಟಿ ತಂಡ ಬೆಳಗಾವಿಗೆ ಕರೆತಂದು ಕೆಲ ಸಮಯ ವಿಚಾರಣೆ ನಡೆಸಿ, ಎಪಿಎಂಸಿ ಠಾಣೆಗೆ ಹಸ್ತಾಂತರಿಸಿ ಹಿಂದಿರುಗಿದೆ. ಬೆಳಗಾವಿ ನಗರದ ಬಾಡಿಗೆ ಮನೆಯೊಂದಕ್ಕೆ ಪೋಷಕರನ್ನು ಸ್ಥಳಾಂತರ ಮಾಡಲಾಗಿದೆ. ಈ ವೇಳೆ ಬಾಡಿಗೆ ಮನೆಯ ಮಾಲೀಕರು ಶೀಘ್ರದಲ್ಲೇ ಮನೆ ಖಾಲಿ ಮಾಡುವಂತೆ ಒತ್ತಡ ಹಾಕಿದ್ದರು. ಪೊಲೀಸರು ಮನವೊಲಿಸಿದರು.

ವಿವರ ↘ 5

11

# ಸೀಡಿ ಲೇಡಿ ಇಂದು ಪ್ರತ್ಯಕ್ಷ

29/3/21

೬ ಮೊದಲ ಪುಟದಿಂದ

ಸೆಕ್ಷನ್ 164 ಪ್ರಕಾರ ಯುವತಿಗೆ ಮ್ಯಾಜಿಸ್ಟ್ರೇಟ್ ಮಂದೆ ಹಾಜರಾಗಿ ಹೇಳಿಕೆ ನೀಡಲು ಅವಕಾಶ ಇದೆ' ಎಂದು ವಕೀಲರು ತಿಳಿಸಿದ್ದಾರೆ.

**ನಮಗೆ ಬೆದರಿಕೆ ಕರೆ- ವಕೀಲರು:** ಈ ಮಧ್ಯೆ ವಕೀಲ ಕೆ.ಎನ್.ಜಗದೀಶ್ ಮತ್ತು ಅವರ ಹಿರಿಯ ಸಹೋದ್ಯೋಗಿ ಮಂಜುನಾಥ್ ಅವರಿಗೆ ಕೆಲವೊಂದು ಬೆದರಿಕೆ ಕರೆಗಳು ಬರುತ್ತಿವೆ ಎಂದು ಜಗದೀಶ್ ಫೇಸ್‌ಬುಕ್‌ನಲ್ಲಿ ತಿಳಿಸಿದ್ದಾರೆ.

ಅಲ್ಲದೆ, ಶನಿವಾರ ರಾತ್ರಿ ಮನೆಗೆ ಹೋಗುವಾಗ ಕಾರೊಂದರಲ್ಲಿ ಕೆಲವು ಅನುಮಾನಾಸ್ಪದ ವ್ಯಕ್ತಿಗಳು ಹಿಂಬಾಲಿಸಿದ್ದಾರೆ. ಮಂಗಳೂರು ಮೂಲದ ಯುವಕನೊಬ್ಬ ಕರೆ ಮಾಡಿ ರಮೇಶ್ ಜಾರಕಿಹೊಳಿ ವಿರುದ್ಧ ವಕಾಲತ್ತು ವಹಿಸಿದ್ದರಿಂದ ಹತ್ಯೆಗೈಯುತ್ತೇನೆ ಎಂದು ಬೆದರಿಕೆಯೊಡ್ಡಿದ್ದಾನೆ ಎಂದು ಜಗದೀಶ್ ಆರೋಪಿಸಿದ್ದಾರೆ. ಇಂತಹ ಯಾವುದೇ ಬೆದರಿಕೆಗೆ ನಾವು ಹೆದರುವುದಿಲ್ಲ. ನಮ್ಮ ಕಥೆಯೇ ಈ ರೀತಿ ಆದರೆ ಸಾಮಾನ್ಯ ದೂರುದಾರರು ಕಥೆ ಏನಾಗಬೇಕು ಎಂದು ಪ್ರಶ್ನಿಸಿದ್ದಾರೆ.

## ಬೆಂಗಳೂರಲ್ಲಿ ಯುವತಿ?

ಸಿ.ಡಿ.ಯಲ್ಲಿನ ಯುವತಿ ಬೆಂಗಳೂರು ಅಥವಾ ಬೆಂಗಳೂರು ಹೊರವಲಯದಲ್ಲಿ ಸಂಬಂಧಿಕರು, ಪರಿಚಯಸ್ಥರ ಮನೆಯಲ್ಲಿ ವಾಸವಾಗಿರುವ ಸಾಧ್ಯತೆಯಿದೆ ಎಂದು ಮೂಲಗಳು ತಿಳಿಸಿವೆ. ಶನಿವಾರ ಒಂದೇ ದಿನ ಎರಡು ಹೇಳಿಕೆ ವಿಡಿಯೋ ಬಿಡುಗಡೆ ಮಾಡಿರುವ ಯುವತಿಯ ಐಪಿ ವಿಳಾಸವನ್ನು ಎಸ್‌ಐಟಿ ಪತ್ತೆ ಹಚ್ಚಿದೆ. ಶನಿವಾರ ಬೆಳಗ್ಗೆ ಘಟನೆ ಹಿನ್ನೆಲೆ ಪ್ರಸ್ತಾಪಿಸಿದ ಯುವತಿ, ಸಂಜೆ ವೇಳೆ ಆಕೆಯ ಪೋಷಕರ ಹೇಳಿಕೆ ಗಮನಿಸಿ ಐದನೇ ವಿಡಿಯೋ ಹರಿಬಿಟ್ಟಿದ್ದಾರೆ. ಈ ವಿಡಿಯೋ ಬೆನ್ನು ಬಿದ್ದ ಎಸ್‌ಐಟಿ ಅಧಿಕಾರಿಗಳು ಎರಡು ವಿಡಿಯೋಗಳನ್ನು ಒಂದೇ ವಿಳಾಸದಲ್ಲಿ ಕಳುಹಿಸಲಾಗಿದೆ ಎಂಬುದನ್ನು ಪತ್ತೆಹಚ್ಚಿದ್ದಾರೆ ಎಂದು ತಿಳಿದು ಬಂದಿದೆ.